ಶ್ರೀ ಕೆ. ಪಿ. ನಾಡಗೌಡ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಸದ್ಯಕ್ಕೆ ಮೈಸೂರು ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯವರು ಪ್ರಾದೇಶಿಕ ಸೀನಿಯಾರಿಟಿಗೆ ಸಂಬಂಧಿಸಿದ ಕಾರ್ಯ ನೀತಿಯನ್ನು ಅನುಸರಿಸುತ್ತಿಲ್ಲ ಎಂದು ಹೇಳಿದ್ದೀರಿ, ಆದರೆ ಎಂದಾದರೂ ಆ ಕಾರ್ಯ ನೀತಿಯನ್ನು ಅನುಸರಿಸಿ ಯಾರಿಗಾದರೂ ಪ್ರಮೋಷನ್ ಕೊಟ್ಟಿದ್ದು ಉಂಟೇ ?

† ಶ್ರೀ ವೀರೇಂದ್ರ ಪಾಟೀಲ್.—ಪ್ರೊವಿಷನಲ್ ಸೀನಿಯಾರಿಟಿ ಲಿಸ್ಟ್ ತಯಾರಾಗುವವರೆಗೂ ಡಿವಿಜನಲ್ ಸೀನಿಯಾರಿಟಿ ಪ್ರಕಾರ ಪ್ರಮೋಷನ್ ಕೊಡಬೇಕೆಂದು ಒಂದು ವಿಚಾರ ಮಾಡಿದ್ದರು. ಆದರೆ ಹೈಕೋರ್ಟಿನವರು ಆ ರೀತಿ ಮಾಡಕೂಡದು ಎಂದು ಆದೇಶವನ್ನು ಕೊಟ್ಟಿದ್ದರಿಂದ ಈಗ ಆ ಪ್ರಕಾರ ಮಾಡುತ್ತಿಲ್ಲ.

ಶ್ರೀ ಕೆ. ಪಿ. ನಾಡಗೌಡ.—ಸ್ಟೇಟ್ ಅಡ್ವೈಜರಿ ಕಮಿಟಿಯವರ ಶಿಫಾರಸ್ಸುಗಳು ಎಷ್ಟು ದಿವಸಗಳಲ್ಲಿ ಬರಬಹುದು ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಸ್ಟೇಟ್ ಅಡ್ವೈಜರಿ ಕಮಿಟಿಯವರು ಅವರ ಶಿಫಾರಸ್ಸುಗಳನ್ನು ನಮಗೆ ಕಳುಹಿಸಿದ್ದಾರೆ. ನಾವು ಅದನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅದಷ್ಟು ಜಾಗ್ರತೆ ಅದು ಅಲ್ಲಿಂದ ಬರಬಹುದು.

ಶ್ರೀ ಸಿದ್ಧಯ್ಯ ಕಾಶೀಮಠ್.—ರೀಜನಲ್ ಸೀನಿಯಾರಿಟಿ ಪ್ರಕಾರ ಪ್ರಮೋಷನ್ ವಗೈರೆ ಸಿಕ್ಕುವುದರಲ್ಲಿ ಅನ್ಯಾಯವಾಗುತ್ತದೆ. ಆದ್ದರಿಂದ ಎಂ.ಎಸ್.ಆರ್.ಟಿ.ಸಿ. ಅವರೇ ಸೀನಿಯಾರಿಟಿ ಲಿಸ್ಟ್ ಮೇಂಟೇನ್ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ರೀಜನಲ್ ಸೀನಿಯಾರಿಟಿ ಲಿಸ್ಟ್ ಮಾಡಬಾರದು, ಪ್ರಮೋಷನ್ ಕೊಡಬಾರದು ಎಂಬ ಹೈಕೋರ್ಟ್ ಆದೇಶ ಕೊಟ್ಟಿದ್ದಾರೆ. ಆದ್ದರಿಂದ ಅವರ ಪ್ರಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಈಗಾಗಲೇ ಸ್ಟೇಟ್ ಅಡ್ವೈಜರಿ ಕಮಿಟಿಯವರು ತಮ್ಮ ವರದಿಯನ್ನು ಕೊಟ್ಟಿದ್ದಾರೆಂದು ತಾವು ಹೇಳಿದಿರಿ. ಹಾಗಾದರೆ ಅದನ್ನು ಈ ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೆ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಸಭೆಯ ಮುಂದೆ ಇಡುವುದಕ್ಕಾಗುವುದಿಲ್ಲ. ಈಗ ಸ್ಟೇಟ್ ಅಡ್ವೈಜರಿ ಕಮೀಷನ್‌ನವರು ಕಳುಹಿಸಿರುವುದು ರೆಕಮೆಂಡೇಷನ್ಸ್. ಆ ರೆಕಮೆಂಡೇಷನ್ಸ್ ಅನ್ನು ಸರ್ಕಾರದವರು ಕನ್‌ಸಿಡರ್ ಮಾಡಿ ಫೈನಲೈಜ್ ಮಾಡುತ್ತಾರೆ.

ಶ್ರೀ ಕೆ. ಎಚ್. ಪಾಟೀಲ್.—ಹೈಕೋರ್ಟಿನ ಆರ್ಡರಿನಂತೆ ಕ್ಯಾಷ್ ಮಾಡಿದನಂತರ ಮೊದಲು ಕೊಟ್ಟ ಪ್ರಮೋಷನ್ ಡಿಮೋಟೊ ಆಯಿತು. ಇದನ್ನು ಇಂಪ್ಲಿಮೆಂಟು ಮಾಡಲು ಸರಕಾರ ಯಾವ ಕ್ರಮ ತೆಗೆದುಕೊಂಡಿದೆ ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿದ್ದ ಹಾಗೆ ಇದು ಇನ್‌ಚಾರ್ಜ್‌ಅರೇಂಜ್‌ಮೆಂಟ್ಸ್ ಎಂದು ಮಾಡಿರುವುದು. ಇದಕ್ಕೆ ಎಂ.ಎಸ್.ಆರ್.ಟಿ.ಸಿ.ಯವರು ಒಂದು ರೆಸಲ್ಯೂಷನ್ ಪಾಸ್ ಮಾಡಿದರು. ಇದನ್ನು ಹೈಕೋರ್ಟ್ ಕ್ಯಾಷ್ ಮಾಡಿತು. ಇದನ್ನು ಇಂಪ್ಲಿಮೆಂಟು ಮಾಡುವ ಪ್ರಶ್ನೆಯೇ ಬರಲಲ್ಲ.

Khanapur–Hemmadge–Talewadi Road

173. Sri N. B. SIRDESAI (Khanapur).—

Will the Minister for Public Works be pleased to state :—

(*a*) whether Khanapur–Hemmadge–Talewadi Road in Khanapur Taluka has been taken over by the Public Works Department for maintenance and improvement ;

(*b*) whether this road is to be maintained and improved as State Fund Road ;

(*c*) whether the work of improvement of this road would be commenced this year ?

A.—Sri K. LAKKAPPA (Minister for Public Works).—

(*a*) Yes.
(*b*) Yes.
(*c*) Depends upon the availability of funds.

Sri N. B. SIRDESAI.—May I know whether Government is aware of the fact that the said road passes through dense forest area and in the vicinity on both the sides of this road many villages are situated, the communication of which is cut off from taluka place during the rainy season and the fair season ?

Sri K. LAKKAPPA.—It has been handed over by the Taluka Board to the P.W.D. very recently in the Government Order dated 15th February 1968. We have understood the importance of the road and as a result of it even during this short period we have made a proposal to spend about Rs. 20,000 out of the lumpsum grant available with us. As it is a very costly affair, the cost is going up to Rs. 15.2 lakhs and so, we propose to take it up in a phased manner as and when funds are available.

Misappropriation of Gurgunta Panchayat's Fund

174. Sri K. SANGANGOWDA (Lingsugur).—

Will the Minister for Development be pleased to state :—

(*a*) the steps taken by Government regarding misappropriation of Gurgunta Panchayat's funds, Lingsugur Taluk, Raichur District by the Secretary and Chairman of the said Panchayat ;

(*b*) whether the Gurgunta Panchayat is functioning now ?

A.—Sri P. M. NADGOUDA (Minister for Development).—

(*a*) A case under Section 409 of I.P.C. has been launched by the Assistant Commissioner, Lingsugur, Raichur District against the Chairman and the Secretary of the T.P. Gurugunta, Taluk Lingsugur, in the matter and the case is under investigation.

(*b*) Yes.

ಶ್ರೀ ಕೆ. ಸಂಗನಗೌಡ—ಇಲ್ಲಿ ಎಷ್ಟು ಹಣ ದುರುಪಯೋಗವಾಗಿದೆ ; ಮತ್ತು ಇದು ಸರಕಾರದ ಗಮನಕ್ಕೆ ಯಾವಾಗ ಬಂತು ಮತ್ತು ಏನು ಕಾರ್ಯಕ್ರಮ ತೆಗೆದುಕೊಂಡಿದೆ ?

† ಶ್ರೀ ಪಿ. ಎಂ. ನಾಡಗೌಡ.—ಇದರಲ್ಲಿ 3,400 ಚಿಲ್ಲರೆಯಷ್ಟು ಹಣ ದುರುಪಯೋಗವಾಗಿದೆ. ಇದು ಎರಡು ತಿಂಗಳ ಹಿಂದೆ ಸರ್ಕಾರದ ಗಮನಕ್ಕೆ ಬಂತು ಮತ್ತು ಪೋಲೀಸಿನವರ ಕಡೆಗೆ ತನಿಖೆ ಮಾಡುವುದಕ್ಕೆ ಮತ್ತು ಡೆಪ್ಯುಟಿ ಕಮಿಷನರವರಿಗೆ ಸೂಚನೆಗಳನ್ನು ಕೂಡ ಕೊಡಲಾಗಿದೆ ಮತ್ತು ಇವರ ಇಮ್ಮೂವಬಲ್ ಪ್ರಾಪರ್ಟೀಸ್‌ಗಳನ್ನು ಅಟ್ಯಾಚ್ ಮಾಡಲು ಹೇಳಲಾಗಿದೆ.